ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 64 ಕೆಬಿಎನ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:06/05/2019.

**ಅಧಿಸೂಚನೆ**

ವಿಷಯ : ನಾರಾಯಣಪುರ ಬಲದಂಡೆ ಕಾಲುವೆಯ ವಿತರಣಾ ಕಾಲುವೆ ಸಂ.17 ಕಿ.ಮೀ.7.50 ರಿಂದ 7.60ರಲ್ಲಿ ಹಾನಿಗೊಳಗಾದ ಎಂಬ್ಯಾಂಕ್‌ಮೆಂಟ್ ರೀಚ್‌ನ ತುರ್ತು ದುರಸ್ಥಿ ಕಾಮಗಾರಿಗೆ 4(ಎ)ರಡಿಯಲ್ಲಿ ಕೈಗೆತ್ತಿಕೊಳ್ಳುವ ಕುರಿತು.

ಉಲ್ಲೇಖ : ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ:ವ್ಯನಿ/ಕೃಭಾಜನಿ/ನಾ.ಬ.ದಂ.ಕಾ/ವಿ.ಕಾ17/ತಾಂತ್ರಿಕ/2018-19/4438 ದಿನಾಂಕ:27/02/2019.

***

ನಾರಾಯಣಪುರ ಬಲದಂಡೆ ಕಾಲುವೆಯ ಮುಖ್ಯ ಕಾಲುವೆ ಕಿ.ಮೀ.94.52 ರಲ್ಲಿ ವಿತರಣಾ ಕಾಲುವೆ-17 ಆಫ್‌ಟೇಕ್ ಹೊಂದಿದ್ದು, ಇದರ ಉದ್ದ 26.00ಕಿಮೀ ಇದ್ದು ಸದರಿ ಕಾಲುವೆ ಜಾಲದಡಿ ನೀರಾವರಿಗೊಳಪಡುವ ಒಟ್ಟು ಅಚ್ಚುಕಟ್ಟು ಕ್ಷೇತ್ರ 8,400ಹೆ. ಆಗಿರುತ್ತದೆ. ದಿನಾಂಕ:10/12/2018ರಂದು ವಿತರಣಾ ಕಾಲುವೆ-17 ಕಿ.ಮೀ.7.50 ರಿಂದ 7.60 ರ ಎಂಬ್ಯಾಂಕ್‌ಮೆಂಟ್ ನಲ್ಲಿ ಉಡಗಳು ಹಾಗೂ ಹೆಗ್ಗಣಗಳಿಂದ ಏರಿ ಭಾಗದಲ್ಲಿ ಕೊರೆದ ರಂಧ್ರಗಳಿಂದಾಗಿ ಬೊಂಗಾ ನಿರ್ಮಾಣಗೊಂಡು ಕಾಲುವೆ ಭಾಗ ಶಿಥಿಲಗೊಂಡು ಸಂಪೂರ್ಣವಾಗಿ ಕೊಚ್ಚಿಕೊಂಡು ಹೋಗಿರುತ್ತದೆ.

ಸದರಿ ವಿತರಣಾ ಕಾಲುವೆಯ ಕೊನೆಯ ಭಾಗದಲ್ಲಿ ರೈತರು ಬೆಳೆದಿರುವ ಹತ್ತಿ ಮತ್ತು ಮೆಣಸಿನಕಾಯಿ ಬೆಳೆಗಳಿಗೆ ತುರ್ತಾಗಿ ನೀರನ್ನು ಹರಿಸಬೇಕಾಗಿರುವ ಅವಶ್ಯಕತೆ ಮನಗಂಡು ಹಾನಿಗೊಳಹಾದ ವಿತರಣಾ ಕಾಲುವೆ ಏರಿ ಭಾಗದ ದುರಸ್ಥಿ ಕಾಮಗಾರಿಯನ್ನು ತುರ್ತು ಪರಿಸ್ಥಿತಿ ಕಾಮಗಾರಿ ಎಂದು ಘೋಷಿಸಿ, ಕರ್ನಾಟಕ ಪಾರದರ್ಶಕತೆ ಸಂಗ್ರಹಣಾ ಕಾಯ್ದೆ 1999 ಕಲಂ 4(ಎ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸರ್ಕಾರವು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಕ್ಕೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಕಾಮಗಾರಿಯನ್ನು ನಿರ್ವಹಿಸಿದ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
06/05/19
(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ತಾಂತ್ರಿಕ-5)

ಇವರಿಗೆ,
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು- ಇವರಿಗೆ ಕಳುಹಿಸಿಕೊಡುತ್ತಾ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರ 50 ಪ್ರತಿಗಳನ್ನು ಒದಗಿಸುವಂತೆ ಕೋರಿದೆ.

----2

ಪ್ರತಿಗಳು:-

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಅಡಿಟ್), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಕೃಭಾಜನಿನಿ, ಕಾಲುವೆ ವಲಯ ಸಂಖ್ಯೆ:1, ಭೀಮರಾಯನಗುಡಿ.
4. ವಿಶೇಷಾಧಿಕಾರಿ ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ-ಆಕೋ, ಬೆಂಗಳೂರು.
5. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜ.ಸಂ. ಇಲಾಖೆ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
8. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು.